ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರು:- ಈಗ ಶೂನ್ಯ ವೇಳೆಗೆ ಒಂದೆರೆಡು ವಿಚಾರ ಮಾಡುವುದಕ್ಕೆ ನಾನು ಅನುಮತಿ ಕೊಟ್ಟಿದ್ದು ನಿಜ. ಆದರೆ ನಿನ್ನೆ ಇವತ್ತು ಸಮಯ ಕಳೆದು ಹೋಗಿದೆ. ಇನ್ನೂ ಕೆಲವು ಶಾಸಕರು ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಂಡಿದ್ದೇನೆ. ಬೇಡಿಕೆಗಳಿಗೆ ಉತ್ತರ ಕೊಡುವುದನ್ನು ಎರಡು ಗಂಟೆ ಮುಂದೆ ಹಾಕಿಕೊಳ್ಳಿ ಎಂದು. ದಯಮಾಡಿ ತಾವು ಎಲ್ಲ ಸಹಕರಿಸಿದರೆ ಆ ಸದಸ್ಯರು ಯಾರು ಉಳಿದು ಹೋಗಿದ್ದಾರೆ ಅವರಿಗೆ ಮಾತನಾಡಲು ಅವಕಾಶ ಕೊಡುತ್ತೇವೆ. ಈಗ ಒಂದೊಂದು ನಿಮಿಷ ಎಲ್ಲಾ ಮಾತನಾಡಿ. ಮೊದಲು ವಾಟಾಳ್ ನಾಗರಾಜ್ ಒಂದು ನಿಮಿಷ. ಆ ನಂತರ ಮಾನ್ಯ ಖರ್ಗೆಯವರನ್ನು ಕರೆಯುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ:- ಕಾವೇರಿ ಸಮಸ್ಯೆ ಕುರಿತು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಅಧ್ಯಕ್ಷರೇ, ಇವತ್ತು ಪತ್ರಿಕೆಯಲ್ಲಿ ಓದಿದ್ದೇನೆ. ಮಾನ್ಯ ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಕರುಣಾನಿಧಿಯವರು ತಮ್ಮ ಶಾಸನ ಸಭೆಯಲ್ಲಿ ಏನು ಹೇಳಿದ್ದಾರೆ ಎಂದರೆ ಕರ್ನಾಟಕದ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾವು ಮಾತುಕತೆ ಆಡಬೇಕಾದರೆ ಅದು ನ್ಯಾಯ ಮಂಡಲಿಯ ಚೌಕಟ್ಟಿನಲ್ಲಿ ಮಾತನಾಡುತ್ತೇವೆ. ಅದನ್ನು ಬಿಟ್ಟು ನಾವು ಬೇರೆ ಯಾವುದೇ ಮಾತು ಆಡುವುದಿಲ್ಲ ಎನ್ನತಕ್ಕ ಮಾತನ್ನು ಕರುಣಾನಿಧಿ ಅವರು ಸ್ಪಷ್ಟಪಡಿಸಿದ್ದಾರೆ. ನಾನು ಇವತ್ತು ಏನು ಹೇಳುತ್ತಿದ್ದೇನೆಂದರೆ ನಮ್ಮ ಸರ್ಕಾರ ಮಾತುಕತೆ ಆಡುವುದಾದರೆ ನ್ಯಾಯ ಮಂಡಲಿಯು ಚೌಕಟ್ಟಿನಲ್ಲಿ ಮಾತನಾಡತಕ್ಕದ್ದು ನಮಗೆ ಅಪಾಯ ಒದಗುತ್ತದೆ. ಅದ್ದರಿಂದ ಇಲ್ಲ ಸಮಗ್ರವಾಗಿ, ಸಂಪೂರ್ಣವಾಗಿ ಇದೇ ಕಾವೇರಿ ಸಮಸ್ಯೆಯ ಬಗ್ಗೆ ಮಾತನಾಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ, ಆದರೆ ನ್ಯಾಯ ಮಂಡಲಿಯ ಚೌಕಟ್ಟಿನಲ್ಲಿ ಮಾತನಾಡುತ್ತೇವೆಂದು ಹೊರಟರೆ ನಮಗೆ ಖಂಡಿತ ಅಪಾಯ ಇದೆ. ಆ ರೀತಿ ನಾವು ಹೊರಡುವುದಾದರೆ ಮತ್ತೆ ನೀರು ಬಿಡಬೇಕಾಗುತ್ತದೆ. ಈಗಾಗಲೇ ನೀರು ಬಿಟ್ಟಿರುವ ಬಗ್ಗೆ ಇಡೀ ರಾಜ್ಯದಾದ್ಯಂತ ದೊಡ್ಡ ಹೋರಾಟ ನಡೆದಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನೀವು ಮಾತುಕತೆಗೆ ಹೋಗತಕ್ಕದ್ದಾದರೆ ಷರತ್ತಿನ ಮೇಲೆ ಹೋಗಬೇಕು. ಷರತ್ತು ಏನು? ನಾವು ನ್ಯಾಯ ಮಂಡಲಿಯನ್ನು ಬಿಟ್ಟು ಮಾತುಕತೆಯನ್ನು ಆಡುವುದಾದರೆ ಮಾತುಕತೆಗೆ ಬರುತ್ತೇವೆ ಎನ್ನತಕ್ಕ ಷರತ್ತನ್ನು ನಾವು ಹಾಕಬೇಕು ಎನ್ನತಕ್ಕದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನನ್ನ ಸಮಸ್ಯೆ ವಿರೋಧ ಪಕ್ಷದ ನಾಯಕನಾಗಿ ಏನಂದರೆ ಈ ಜೀರೋ ಅವರ್ ಇರಬೇಕೋ ಅಥವಾ ಬೇಡವೋ ಎನ್ನುವುದು ಮುಖ್ಯವಾಗಿದೆ. ಈಗ ಡಿಮ್ಯಾಂಡ್ ಮೇಲೆ ಚರ್ಚೆ ಆಗುತ್ತಿರುವುದರಿಂದ,

ಬಹಳ ಪ್ರಮುಖವಾದಂತಹ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾವು ಇವತ್ತು ಬಹಳ ಸ್ಪಷ್ಟವಾಗಿ ಈ ಕಾವೇರಿ ಜಲಾನಯನದ ಪ್ರದೇಶದ ನಮ್ಮ ಜನಕ್ಕೆ ಅನ್ಯಾಯ ಆಗುತ್ತಿದೆ ಎನ್ನುವ ದೃಷ್ಟಿಯಿಂದ ಆ ಟ್ರಿಬ್ಯುನಲ್‌ನಿಂದ ಹೊರಗಡೆ ಇದ್ದು ಮಾತುಕತೆ ಆದರೆ ಅದಕ್ಕೆ ನಾವು ಸಿದ್ಧ ಇದ್ದೇವೆ. ಇವತ್ತು ನಮ್ಮವರೇ ಪ್ರಧಾನಿ ಆಗಿದ್ದಾರೆ. ನ್ಯಾಷನಲ್ ವಾಟರ್ ಪಾಲಿಸಿ ಫ್ರೇಮ್ ಆಗದೇ ಯಾವುದೇ ಈ ರೀತಿ ಇತ್ಯರ್ಥ ಆಗುವುದಿಲ್ಲ ಎನ್ನುವುದು ಬಹಳ ದಿವಸದಿಂದ ಈ ಸದನದಲ್ಲಿ ನಡೆದಂತಹ ಚರ್ಚೆ. ನೀವು ಮಾಡಬೇಕಾದಂತಹ ಕೆಲಸ ಮಾತುಕತೆ ಅಲ್ಲ. ನಮ್ಮ ಪ್ರಧಾನ ಮಂತ್ರಿಗಳು ಅಲ್ಲಿರ-ಬೇಕಾದರೆ ಸಮಸ್ಯೆ ಗೊತ್ತಿರಬೇಕಾದರೆ ನ್ಯಾಷನಲ್ ವಾಟರ್ ಪಾಲಿಸಿ ಫ್ರೇಮ್ ಆಗುವ ಹಾಗೆ ಏನಾದರೂ ಕ್ರಮ ಇದುವರೆಗೂ ತಾವು ತೆಗೆದುಕೊಳ್ಳಲಿಲ್ಲ. ಒತ್ತಾಯವನ್ನು ನೀವು ಮಾಡಲಿಲ್ಲ. ಮಾತುಕತೆಗೆ ಹೋಗುವುದಕ್ಕಿಂತ ಮುಂಚೆ ದಯಮಾಡಿ ಇದುವರೆಗೆ ಯಾವ ರೀತಿ ವಿಶ್ವಾಸಕ್ಕೆ ತೆಗೆದುಕೊಂಡು ಒಳಗಡೆ ಕುಳಿತು ಚರ್ಚೆ ಮಾಡಿ ಮಾತುಕತೆಗೆ ಹೋಗುತ್ತಿದ್ದೆವೋ ಹಾಗೆಯೇ ನಮ್ಮ ವಿರೋಧ ಪಕ್ಷದವರ ಕೆಲವು ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು ನೀವು ಮಾತುಕತೆಗೆ ಹೋಗಬೇಕು. ಪ್ರತಿ ಒಂದು ಸಂದರ್ಭದಲ್ಲಿ ಆಂಧ್ರ ಇರಬಹುದು, ಇವತ್ತು ತಮಿಳುನಾಡು ಇರ-ಬಹುದು. ಈ ಪ್ರಸ್ತಾಪಗಳು ಬರುತ್ತಿರುವುದರಿಂದ ನಮಗೆ ಗಾಬರಿ ಆಗುತ್ತಿದೆ; ಭಯ ಆಗುತ್ತಿದೆ. ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸುವುದಕ್ಕೆ ನಮಗೆ ಸಂಪೂರ್ಣ ಸ್ವಾಗತ ಇದೆ. ಆದರೆ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಂತೆ ಆ ಟ್ರಿಬ್ಯೂನಲ್‌ನ ಚೌಕಟ್ಟಿನಿಂದ ಹೊರಬಂದು ವಾಸ್ತ-ವಿಕ ಸ್ಥಿತಿ ಅರ್ಥ ಮಾಡಿಕೊಂಡು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಏನು ಇದೆ, ಅದನ್ನು ಫ್ರೇಮ್ ಮಾಡಿದ ಮೇಲೆ ನೀವು ಮಾತುಕತೆ ಆಡಿ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯ ಆಗುತ್ತದೆ. ಆದರ ಕಡೆ ಹೆಚ್ಚು ಒತ್ತನ್ನು ನೀವು ಕೊಡಬೇಕು. ನಂತರ ನೀವು ಮಾತುಕತೆಗೆ ಹೋಗಬೇಕು ಎಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಅಧ್ಯಕ್ಷರೆ, ನಾನು ಅದರ ಬಗ್ಗೆ ಕೇಳ-ಬೇಕು ಎಂದು ಬರೆದು ಕೊಟ್ಟಿದ್ದೆ. ಮಾನ್ಯ ವಾಟಾಳ್ ನಾಗರಾಜ್ ಹಾಗೂ ಯಡಿಯೂರಪ್ಪನವರೂ ಕೂಡ ವಿಷಯ ಎತ್ತಿದ್ದಾರೆ. ಈಗ ನಮ್ಮ ಮುಂದೆ ಇರತಕ್ಕ ಪ್ರಶ್ನೆ ಇಷ್ಟೆ. ಐದನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಮದ್ರಾಸಿಗೆ ಮಾತುಕತೆಗಾಗಿ ಹೋಗುವವರಿದ್ದಾರೆ ಎಂದು ನಮಗೆ ಗೊತ್ತಾಗಿದೆ. ಮಾತುಕತೆ ಅವರು ಆಡಬೇಕಾಗಿದ್ದರೆ ಯಾವ ಆಧಾರ ಇಟ್ಟುಕೊಂಡು ಮಾತನಾಡುತ್ತಾರೆ ಎಂಬುದು ನಮಗೆ ಗೊತ್ತಾಗಬೇಕು. ಏಕೆಂದರೆ ಕೊನೆಗೆ ನೀವು ಅಲ್ಲಿ ಔಟ್‌ಸೈಡ್ ದಿ ಟ್ರಿಬ್ಯೂನಲ್ ಎಂಬುದಕ್ಕೆ ಒಪ್ಪಿಕೊಂಡಿದ್ದೀರಿ. ಅಂದರೆ ಸುಪ್ರೀಂ ಕೋರ್ಟಿನವರು ಇವತ್ತು ಡೈರೆಕ್ಷನ್ ಕೊಟ್ಟು ಇಬ್ಬರೂ ಮುಖ್ಯ ಮಂತ್ರಿಗಳು ಸೇರಿ ಇದನ್ನು ಬಗೆಹರಿಸಿಕೊಳ್ಳಬೇಕು ಎಂದು ನಿರ್ದೇಶನ ಕೊಟ್ಟಿದ್ದಾರೆ. ಡೈರೆಕ್ಷನ್ ಕೊಟ್ಟ ಮೇಲೆ ಈಗ ಯಾವ ಆಧಾರಗಳನ್ನು ಇಟ್ಟುಕೊಂಡು ತಾವು ಮಾತನಾಡುತ್ತೀರಿ ಎನ್ನತಕ್ಕದ್ದು ಒಂದು. ಎರಡನೆಯದಾಗಿ ಈ ಟ್ರಿಬ್ಯುನಲ್‌ನ ಅಧ್ಯಕ್ಷರ ನೇಮಕಾತಿ ಮಾಡತಕ್ಕ ಅವಶ್ಯಕತೆ ಇಲ್ಲ ಎನ್ನತಕ್ಕ-ದ್ದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಯವರಿಗೆ ಹೇಳಿ ಮನ ಒಲಿಸಿ ಕೊಟ್ಟರೆ

ಒಳ್ಳೆಯದು. ಆ ಟ್ರಿಬ್ಯೂನಲ್ ಕೂಡ ಇವತ್ತು ಫಂಕ್ಷನ್ ಆಗುವುದಿಲ್ಲ. ಆ ಟ್ರಿಬ್ಯೂನಲ್ ಫಂಕ್ಷನ್ ಆಗಲಿಲ್ಲ ಎಂದರೆ ನಾಳೆ ಹೈಕೋರ್ಟಿನಿಂದ ಯಾವುದೇ ಡೈರಕ್ಷನ್ ಕೊಟ್ಟರೂ ಕೂಡ ಇಬ್ಬರೂ ಮುಖ್ಯಮಂತ್ರಿಗಳು ಸೇರಿ ಸೌಹಾರ್ದಪೂರ್ವಕವಾಗಿ ಯಾವುದು ನಮ್ಮ ರಾಜ್ಯಕ್ಕೆ ಅನುಕೂಲ ಆಗುತ್ತದೆ ಎನ್ನತಕ್ಕ ದೃಷ್ಟಿಯಿಂದ ಕುಳಿತು ಮಾತುಕತೆ ಆಡಿ ಬಗೆಹರಿಸಿಕೊಳ್ಳಬೇಕು. ಏಕೆಂದರೆ ಇದರ ಬಗ್ಗೆ ನಾವು ಹಿಂದಿನಿಂದಲೂ ಸ್ವಾಗತ ಮಾಡಿಕೊಂಡು ಬಂದಿದ್ದೇವೆ. ಔಟ್‌ಸೈಡ್ ದಿ ಟ್ರಿಬ್ಯೂನಲ್ ನಾವು ಮಾತನಾಡಲಿಕ್ಕೆ ತಯಾರು ಇದ್ದೇವೆ ಎನ್ನತಕ್ಕ ಮಾತು ಪದೇ ಪದೇ ಈ ಸಂದರ್ಭದಲ್ಲಿ ಮತ್ತು ಎಲ್ಲಾ ಸರ್ವ ಪಕ್ಷದ ಸಭೆಯನ್ನು ಮಾಡಿದಾಗ ಕೂಡ ಇದನ್ನು ಹೇಳಿದ್ದೇವೆ ಮತ್ತು ಈ ಸದನದಲ್ಲಿ ಅದೇ ರೀತಿಯಾಗಿ ಕೂಡ ಅಭಿಪ್ರಾಯ ಮೂಡಿ ಬಂದಿದೆ. ಆದಕ್ಕಾಗಿ ದಯವಿಟ್ಟು ತಾವು ಟ್ರಿಬ್ಯೂನಲ್ ಅಧ್ಯಕ್ಷರನ್ನು ಮಾಡಬಾರದು ಎನ್ನತಕ್ಕ ಒಂದು ನಿಲುವನ್ನು ತೆಗೆದುಕೊಂಡು ಅದರ ಬಗ್ಗೆ ಒತ್ತಾಯ ಮಾಡತಕ್ಕದ್ದು ಒಂದು. ಎರಡನೆಯದು ಏನು ಅಂದರೆ ಸುಪ್ರೀಂ ಕೋರ್ಟಿನವರು ಏನು ಡೈರೆಕ್ಷನ್ ಕೊಟ್ಟಿದ್ದಾರೆ ಆ ಡೈರೆಕ್ಷನ್ ಪ್ರಕಾರ ನೀವು ಮಾತುಕತೆ ಆಡಿದರೂ ಕೂಡ ಯಾವ್ಯಾವ ಕಂಡೀಷನ್ ಮೇಲೆ ಅಥವಾ ಯಾವ್ಯಾವ ವಿಚಾರದ ಬಗ್ಗೆ ಮಾತನಾಡುತ್ತೀರಿ ಎನ್ನತಕ್ಕದ್ದು ಈ ಸದನದ ಸದಸ್ಯರ ವಿಶ್ವಾಸಕ್ಕೆ ತೆಗೆದುಕೊಂಡು ಮಾತನಾಡಿದರೆ ಉತ್ತಮ ಆಗುತ್ತದೆ. ಇಲ್ಲದಿದ್ದರೆ ತಾವು ಐದನೇ ತಾರೀಖು ಹೋಗುತ್ತೀರಿ. ಐದನೇ ತಾರೀಖು ಹೋಗಿ ಮಾತುಕತೆ ಆಡಿಕೊಂಡು ಪುನಃ ಅವರು ಒಂದು ಐದು ಟಿಎಂಸಿ ನೀರು ಬಿಡು ಎಂದಿದ್ದಾರೆ, ಏಕೆಂದರೆ ಅವರ ಬೆಳೆ ಒಣಗುತ್ತಿದೆ. ಆದಕ್ಕಾಗಿ ನಮ್ಮಲ್ಲಿ ಸ್ವಲ್ಪ ನೀರು ಇದೆ, ಬಿಡಬಹುದು ಎಂದು ಹೇಳಿ ಒಂದು ತೀರ್ಮಾನ ನೀವು ತೆಗೆದುಕೊಂಡು ಬಂದರೆ ಮತ್ತು ಹ್ಯುಮ್ಯಾನಿಟೇರಿಯನ್ ಗ್ರೌಂಡ್ ಎಂದು ನೀವು ಹೇಳುತ್ತೀರಿ. ಆ ಹ್ಯುಮ್ಯಾನಿಟೇರಿಯನ್ ಗ್ರೌಂಡ್ ಮೇಲೆ ನಾವು ನೀರು ಬಿಟ್ಟಿದ್ದೇವೆಂದು ಹೇಳಿ ಪುನಃ ಅದನ್ನು ಕನ್‌ವೇ ಮಾಡುವುದಕ್ಕೆ ತಾವು ಈ ಸದನಕ್ಕೆ ಬರಬಾರದು. ಯಾವ ಕಂಡೀಷನ್ ಮೇಲೆ ತಾವು ಮಾತುಕತೆ ಆಡುತ್ತೀರಿ ಎನ್ನುವುದನ್ನು ದಯವಿಟ್ಟು ತಿಳಿಸಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

+ ಶ್ರೀ.ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಬಹಳ ಸ್ಪಷ್ಟ ಮಾಡಿದ ರೀತಿಯಲ್ಲಿ ನಮಗೆ ನಮ್ಮ ಅಡ್ವೊಕೇಟ್ ಶ್ರೀ ಮೋಹನ್ ಕಾತರಕಿಯವರು ತಿಳಿಸಿರತಕ್ಕಂಥ ಹಿನ್ನಲೆಯೊಳಗೆ ಇವತ್ತು ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ನಾವು ಮಾತುಕತೆಗೆ ಹೋಗುತ್ತಿರತಕ್ಕದ್ದು ಎನ್ನತಕ್ಕದ್ದನ್ನು ಈ ಸದನಕ್ಕೆ ಮತ್ತೊಮ್ಮೆ ಸ್ಪಷ್ಟ ಮಾಡಲು ನಾನು ಬಯಸುತ್ತೇವೆ. ಸುಪ್ರೀಂ ಕೋರ್ಟ್ ಮುಂದೆ ಇದ್ದಂತಹ O.S.No. 1/92 before the Supreme Court. They have given the direction saying that -

"I am directing the Chief Ministers to convey . . . we have received a communication from Supreme Court Advocate Sri Mohan Kartarki in the context of the Supreme Court hearing

which took place today on the Cauvery Water dispute. It appears in the course of the proceedings the Hon'ble Bench advised that the Chief Ministers of Karnataka and Tamilnadu meet together as soon as possible in order to find an amicable solution at the political level to the problem of implementation of the interim order of the Tribunal."

ಎಂದು ಈಗಾಗಲೇ ಬೆಳಿಗ್ಗೆ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಪರಸ್ಪರ ದೂರವಾಣಿ ಮುಖಾಂತರ ಮಾತನಾಡಿದ್ದಾರೆ. ಈ ತಿಂಗಳ ಪ್ರಾರಂಭದಲ್ಲಿ ಮದ್ರಾಸಿನಲ್ಲಿ ಸಭೆ ನಡೆಯಲಿದ್ದು, ಅನಂತರ ದೆಹಲಿಗೆ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಬೇಕೆಂಬುದು ನಮ್ಮೆಲ್ಲರ ಅನಿಸಿಕೆಯಾಗಿರುವುದಲ್ಲದೆ ಆಲಮಟ್ಟಿ ಅಣೆಕಟ್ಟಿನ ವಿಚಾರದಲ್ಲಿ ಆಂಧ್ರ ಪ್ರದೇಶ ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳು 6ನೇ ತಾರೀಖಿನ ದಿವಸದ ಸಭೆಗೆ ಬರಬೇಕೆಂದು ಆಹ್ವಾನಿಸಿ ಕೇಂದ್ರ ಸರ್ಕಾರದವರು ನಮಗೆ ಕಾಗದ ಬರೆದಿದ್ದಾರೆ. ಆದುದರಿಂದ, 5ನೇ ತಾರೀಖಿನಂದು ನಾವು ಮದ್ರಾಸಿನಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ 6ನೇ ತಾರೀಖಿನ ದಿವಸ ದೆಹಲಿಯಲ್ಲಿ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಆಲಮಟ್ಟಿ ಅಣೆಕಟ್ಟಿನ ವಿಚಾರವಾಗಿ ಮಾತನಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಈಗತಾನೇ ಓದಿದಿರಿ. ಓದುವಾಗ ತಾವು ಒತ್ತಿ ಹೇಳಿದಿರಿ: "The Supreme Court had directed the two Chief Ministers to solve the problem politically" ಎಂದು ದಿನಾಂಕ 25ನೇ ಜೂನ್ 1991ರಂದು ನ್ಯಾಯ ಮಂಡಳಿ ಹೊರಡಿಸಿರುವ ಆದೇಶವೇ ಅಥವಾ ಬೇರೆ ಆದೇಶವೇ ಎನ್ನುವುದರ ಬಗ್ಗೆ ಹೇಳಿದರೆ ಗೊತ್ತಾಗುತ್ತದೆ. ಇಲ್ಲದಿದ್ದರೆ, ಅದೇ ಆದೇಶವಿದ್ದರೆ ಏನೂ ಅರ್ಥವಿರುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ:- ಈಗ ನಾವು ಮಾತುಕತೆಗೆ ಹೋಗುತ್ತಿರುವುದು ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶದ ಮೇಲೆಯೇ ಎಂಬುದನ್ನು ಸ್ಪಷ್ಟ ಪಡಿಸಿದ್ದೇನೆ. ಎರಡನೆಯದಾಗಿ, ಬರೀ ನ್ಯಾಯ ಮಂಡಳಿಯ ಪರ್‌ವ್ಯೂ ಒಳಗಡೆ ನಾವು ಮಾತನಾಡಿಕೊಳ್ಳುತ್ತೇವೆಂದು ಹೇಳಿರುವುದು ಅವರ ಸರ್ಕಾರದ ತೀರ್ಮಾನವಾಗಿರಬಹುದು. ನಾನು ಇವತ್ತು ಬೆಳಿಗ್ಗೆ ಅಡ್ವೊಕೇಟ್‌ರವರಾದ ಮೋಹನ್ ಕಾತರಕಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಮಾತನಾಡಿರುವ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿನ ಪೀಠ ಏನು ಹೇಳಿದೆಯೆಂದರೆ ವಿವಾದವಾಗಿ ಉಳಿದಿರುವ ಈ ವಿಚಾರವನ್ನು ಎರಡೂ ರಾಜ್ಯಗಳು ಪರಸ್ಪರ ಸೌಹಾರ್ದದಿಂದ ಬಗೆಹರಿಸಿಕೊಳ್ಳಲು ತೀರ್ಮಾನ ಕೈಗೊಂಡರೆ ನಮಗೆ ತುಂಬಾ ಸಂತೋಷವಾಗುತ್ತಿದೆಂದು. ಆದುದರಿಂದ, ನಾವು ಅಲ್ಲಿಗೆ ಹೋಗುವುದರಿಂದ ಅದರ ಬಗ್ಗೆ ಏನೇನು ವಿಚಾರಗಳಿವೆಯೆಂಬುದರ ಬಗ್ಗೆ ಈ ಸದನದಲ್ಲಿ ಬಹಿರಂಗಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ತಮಿಳುನಾಡಿನ ಮುಖ್ಯಮಂತ್ರಿಗಳಾಗಿರುವ ಕರುಣಾನಿಧಿಯವರು ಆ ಕುರಿತು ಹೊರಗಡೆ ಹೇಳಲಿಲ್ಲ, ಶಾಸನಸಭೆಯಲ್ಲಿಯೇ ಅವರು ಸ್ಪಷ್ಟಪಡಿಸಿದ್ದಾರೆ. ಏನೆಂದರೆ, ನ್ಯಾಯ ಮಂಡಳಿಯ ಚೌಕಟ್ಟು ಬಿಟ್ಟು ಮಾತನಾಡುವುದಿಲ್ಲವೆಂದು. ಹಾಗಾದರೆ, ಈ ದಿಸೆಯಲ್ಲಿ ನಮ್ಮ ರಾಜ್ಯದ ಸೂತ್ರಗಳೇನು?

ಶ್ರೀ ಕೆ.ಎನ್. ನಾಗೇಗೌಡ:- ನಾನು ಕರುಣಾನಿಧಿಯವರು ತೆಗೆದುಕೊಂಡಿರುವ ನಿಲುವಿನ ಬಗ್ಗೆ ಮಾತನಾಡಲು ತಯಾರಿಲ್ಲ. ಅವರ ನಿಲುವು ಹಾಗಿದ್ದರೆ ನಮ್ಮ ಸರ್ಕಾರ ಏನು ನಿಲುವು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಾವು ಕುಳಿತು ಆಲೋಚಿಸುತ್ತಿದ್ದೇವೆ. ನಾವು 5ನೇ ತಾರೀಖಿನಂದು ಹೋಗುತ್ತಿರುವುದರಿಂದ, ಅಲ್ಲಿ ಇದರ ಬಗ್ಗೆ ಕುಳಿತುಕೊಂಡು ಮಾತನಾಡುತ್ತೇವೆ. ಆದುದರಿಂದ, ಆ ಕುರಿತ ವಿಚಾರವನ್ನು ಸದನದಲ್ಲಿ ಬಹಿರಂಗಪಡಿಸಲು ನಾನು ತಯಾರಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನ್ಯಾಯ ಮಂಡಳಿಯು ಹೊರಡಿಸಿರುವ ಆದೇಶದ ಚೌಕಟ್ಟಿನಲ್ಲಿಯೇ ನಾವು ಮಾತನಾಡುತ್ತೇವೆಂದು ಕರುಣಾನಿಧಿಯವರು ದೇಶದ ಜನರ ಮುಂದೆ ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ, ಈ ವಿಚಾರದಲ್ಲಿ ಅವರ ಜೊತೆಗೆ ಮಾತುಕತೆಗೆ ಹೋಗುತ್ತಿರುವ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರದ ನಿಲುವು ಏನಿದೆ ಎಂಬುದರ ಬಗ್ಗೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತೇವೆಂದು ನೀವು ಹೇಳದಿದ್ದರೆ, ಹೇಗೆ? ಅಲ್ಲದೇ, ಇದರ ಬಗ್ಗೆ ಸದನದಲ್ಲಿ ನಾವು ನೂರಾರು ಬಾರಿ ಚರ್ಚಿಸಿದ್ದು, ಈ ರೀತಿ ಅಂತರ್ ರಾಜ್ಯಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಉದ್ಭವಿಸಿದಾಗ ಈ ಕುರಿತು ರಾಷ್ಟ್ರೀಯ ಜಲ ನೀತಿ ರೂಪಿಸದೆ ಮಾರ್ಗಸೂಚಿ ಏನಿದೆ?

ಅಧ್ಯಕ್ಷರು:- ಮಾನ್ಯ ಕರುಣಾನಿಧಿಯವರು ಹೇಗೆ ಅಲ್ಲಿನ ಶಾಸನಸಭೆಯಲ್ಲಿ ಹೇಳಿದ್ದಾರೋ ಹಾಗೆಯೇ ನಾನು ಹೇಳುತ್ತೇನೆಂದರೆ, ನಾನು ಆ ನಿರ್ಬಂಧಕ್ಕೆ ಒಳಪಟ್ಟಿರುವುದಿಲ್ಲವೆನ್ನುವ ಮಾತನ್ನು ಸಚಿವರು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದರಲ್ಲಿ ನಮಗೆ ಸಂಶಯವೇನಿಲ್ಲ. ನಮಗೆ ಏಕೆ ಅನುಮಾನವಿದೆಯೆಂದರೆ, ಈ ಸರ್ಕಾರದ ಬಗ್ಗೆ ವಿಶ್ವಾಸವಿದೆ. ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ರಾಜ್ಯದ ಹಿತ ಕಡೆಗಣಿಸಿ ಹೋಗುತ್ತಾರೆಂದು ನಾನಂತೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಸಿದ್ಧವಿಲ್ಲ. ಆದರೆ, ಕೇಂದ್ರದಲ್ಲಿ ಎಲ್ಲಾ ಪಕ್ಷಗಳೂ ಒಟ್ಟಾಗಿ ಸೇರಿ ರಚಿಸಿರುವ ಸರ್ಕಾರವಿರುವುದರಿಂದ ಹೇಗೋ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ತಿಳಿದು ಕೊಂಡಿರಬಹುದು. ಹಿಂದೆ ಒಂದು ಸಾರಿ ಆದ ತಪ್ಪಿನಿಂದ ನ್ಯಾಯ ಮಂಡಳಿ ರಚನೆಯಾಗುವುದಕ್ಕೆ ನಾವೇ ಕಾರಣರಾದೆವು. ಆಗ ಸರಿಯಾಗಿ ನಡೆದುಕೊಂಡಿದ್ದರೆ ನ್ಯಾಯ ಮಂಡಳಿ ರಚನೆಯಾಗುತ್ತಿರಲಿಲ್ಲ. ಆವೊತ್ತು ಏನು ಹೋರಾಟ ಮಾಡಿದೆವು, ಪ್ರಧಾನಮಂತ್ರಿಗಳಿರಬಹುದು, ಎರಡೂ ರಾಜ್ಯಗಳ ಮುಖ್ಯಮಂತ್ರಿಗಳಿರಬಹುದು, ಇವೊತ್ತು ಅವರ ರಾಜ್ಯದ ಹಿತವನ್ನು ಕೈಬಿಡಲು ಅವರು ಸಿದ್ಧರಾಗುವುದಿಲ್ಲ. ಅವರಿಗೆ ಒಂದು ಆಧಾರವಿದೆ. ಏನೆಂದರೆ, ನ್ಯಾಯ ಮಂಡಳಿ ಕೊಟ್ಟಿರುವ ತೀರ್ಮಾನ ನಿಮ್ಮ ಕಣ್ಮುಂದಿದೆ. ಈ

ಸಮಯದಲ್ಲಿ ಅವೊತ್ತಿನಿಂದ ಇವೊತ್ತಿನವರೆವಿಗೂ ರಾಷ್ಟ್ರೀಯ ಜಲ ನೀತಿ ರೂಪಿಸಿ ಒಂದು ಮಾರ್ಗ-ಸೂಚಿಯಾಗಬೇಕೆಂದು ಒತ್ತಾಯ ಮಾಡಿ ಹೇಳಿದಂಥವರು ಇವೊತ್ತು ಒಂದು ಶಬ್ದವನ್ನು ಕೂಡ ನೀವು ಹೇಳುತ್ತಿಲ್ಲ ಮತ್ತು ಪ್ರಧಾನಮಂತ್ರಿಗಳಿಗೆ ಸದರಿ ವಿಚಾರದಲ್ಲಿ ಒತ್ತಾಯ ತರುವಂಥ ಪ್ರಯತ್ನ-ವನ್ನೂ ಮಾಡುತ್ತಿಲ್ಲ. ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ನೀವು ಹೇಗೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಇದು ನಿಮ್ಮ ಸ್ವಂತ ವ್ಯವಹಾರವಲ್ಲವಾದ್ದರಿಂದ ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳ-ಬೇಕಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ:- ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಿಗೆ ನಾನು ತಮ್ಮ ಮೂಲಕ ತಿಳಿಸುವುದೇವೆಂದರೆ, ಮದ್ರಾಸ್‌ನಲ್ಲಿ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಂತರ ನಾವು ನಮ್ಮ ಪ್ರಧಾನಮಂತ್ರಿಗಳನ್ನು ದೆಹಲಿಯಲ್ಲಿ ಭೇಟಿ ಮಾಡಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸುವುದಕ್ಕೆ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆಂದು ನಾನು ಆಗಲೇ ಸೂಕ್ಷ್ಮವಾಗಿ ಹೇಳಿದ್ದೇನೆ. ಇದರ ಬಗ್ಗೆ ಬೇಕಾದರೆ ಸದನದ ಹೊರಗಡೆ ಈ ಕ್ಷಣದಲ್ಲಿ ವಿರೋಧ ಪಕ್ಷದ ನಾಯಕರ ಕೊಠಡಿಗೆ ಮತ್ತು ಮಲ್ಲಿಕಾರ್ಜುನ ಖರ್ಗೆಯವರ ಕೊಠಡಿಗೆ ಬರುತ್ತೇನೆ. ನಾವು ಕುಳಿತುಕೊಂಡು ಮಾತ-ನಾಡೋಣ. ಆದುದರಿಂದ, ನಮ್ಮಲ್ಲಿರತಕ್ಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದು ಸೂಕ್ತವಲ್ಲ, ಅದನ್ನು ಬಿಡಿಸಿ ಹೇಳುವುದಕ್ಕೂ ನಾನು ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಕರುಣಾನಿಧಿಯವರು ಅಲ್ಲಿನ ಶಾಸನಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು 'ಮಾತುಕತೆಗೆ ಹೋಗುವುದಾದರೆ ನ್ಯಾಯ ಮಂಡಳಿ ಚೌಕಟ್ಟು ಬಿಟ್ಟು ಹೋಗುವುದಿಲ್ಲ'ವೆಂದು ಶಾಸನಸಭೆಯಲ್ಲಿಯೇ ಸ್ಪಷ್ಟಪಡಿಸಿದ್ದಾರೆ. ಆದುದರಿಂದ, ಇದರ ಬಗ್ಗೆ ಗೌಪ್ಯ-ವಾಗಿ ಮಾತನಾಡುವುದೇನಿದೆ? ವಿಚಾರ ಸದನದಲ್ಲಿ ಬಹಿರಂಗವಾಗಲಿ, ನಿಮ್ಮ ಬಗ್ಗೆ ನನಗೆ ಬಹಳ ಗೌರವವಿದೆ ಮತ್ತು ನಮ್ಮ ಕರ್ನಾಟಕದ ಹಿತ ಕಾಪಾಡುವುದರಲ್ಲಿ ನೀವು ಹಿಂದೆ ಬೀಳುತ್ತೀರೆಂದು ನಾನು ಹೇಳುತ್ತಿಲ್ಲ, ಕರ್ನಾಟಕದ ಪರವಾಗಿಯೇ ತಾವು ಇದ್ದೀರಿ. ಆದುದರಿಂದ, ತಮ್ಮಲ್ಲಿ ಕಳಕಳಿ-ಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ನಮ್ಮ ರಾಜ್ಯದ ಸೂತ್ರವೇನು? ನ್ಯಾಯ ಮಂಡಳಿ ಚೌಕಟ್ಟು ಬಿಟ್ಟು ಹೊರಗಡೆ ಮಾತನಾಡುತ್ತೇವೆಂದರೆ ನನ್ನದೇನೂ ಅಭ್ಯಂತರವಿಲ್ಲ, ಆದನ್ನು ಸ್ವಾಗತಿ-ಸುತ್ತೇನೆ. ಆದರೆ, ನ್ಯಾಯ ಮಂಡಳಿ ಚೌಕಟ್ಟಿನೊಳಗೆ ನೀವು ಮಾತನಾಡುವುದಾದರೆ ನಮಗೆ ಅಪಾಯ ಕಾದಿದೆ.

ಅಧ್ಯಕ್ಷರು:- ಅವರು ಅವರ ಶಾಸನಸಭೆಯಲ್ಲಿ ಆ ರೀತಿ ಹೇಳಿ, ಆದಕ್ಕೆ ನಾವು ಒಪ್ಪುವುದಿಲ್ಲ-ವೆಂದು ಇವರು ಇಲ್ಲಿ ಹೇಳಿದರೂ, ಸಹ ಹೇಗಿದ್ದರೂ 5ನೇ ತಾರೀಖಿನ ದಿವಸ ಇವರು ಅಲ್ಲಿಗೆ ಮಾತುಕತೆಗೆ ಹೋಗಬೇಕಲ್ಲವೇ? ರಾಜ್ಯದ ಹಿತದೃಷ್ಟಿಯಿಂದ ಕೆಲವು ವಿಚಾರಗಳನ್ನು ಹೊರಗಡೆ ಓದಿ ಹೇಳಲು ತಯಾರಿಲ್ಲ, ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆಂದೂ, ಆ ನಿರ್ಬಂಧಕ್ಕೆ ನಾನು ಒಳಪಟ್ಟಿರುವುದಿಲ್ಲವೆಂದು ಸೂಕ್ಷ್ಮವಾಗಿ ಸಚಿವರು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಇದು ವೈಯಕ್ತಿಕ ಪ್ರಶ್ನೆ ಅಲ್ಲ, ಸಚಿವರ ಬಗ್ಗೆ ನನಗೆ ಗೌರವವಿದೆ. ನ್ಯಾಯಮಂಡಳಿ ಚೌಕಟ್ಟು ಬಿಟ್ಟು ಮಾತುಕತೆಗೆ ಹೋಗುತ್ತೇವೆಂದು ಸಚಿವರು ಸ್ಪಷ್ಟವಾಗಿ ಹೇಳಬೇಕು. ಆ ರೀತಿ ಹೇಳಲಿಲ್ಲವೆಂದರೆ ನೀವು ಮಾತುಕತೆಗೆ ಹೋಗುವುದರಲ್ಲಿ ಪ್ರಯೋಜನವಿಲ್ಲ, ಮಾತುಕತೆಗೆ ಹೋಗಕೂಡದೆಂದು ನಾವು ಸ್ಪಷ್ಟವಾಗಿ ಹೇಳುತ್ತಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ:- ಒಂದು ಮಾತನ್ನು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರಿಗೆ ತಿಳಿಸಲಿಚ್ಛಿಸುತ್ತೇನೆ. ಮಾತುಕತೆಗೆ ಏರ್ಪಾಟಾಗಿರುವುದು ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇಲೆಯೇ ಹೊರತು ನ್ಯಾಯ ಮಂಡಳಿಯ ಆದೇಶದ ಮೇಲಲ್ಲ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಯಾವುದೇ ಸರ್ಕಾರ ಅಧಿಕಾರದಲ್ಲಿದ್ದಾಗ ಒಪ್ಪಿಕೊಳ್ಳಬೇಕಾಗುತ್ತದೆ. ಆ ಆದೇಶದ ಮೇಲೆಯೇ ನಾವು ಮಾತುಕತೆಗೆ ಹೋಗುತ್ತಿದ್ದೇವೆಂದು ಆಗಲೇ ಸೂಕ್ಷ್ಮವಾಗಿ ಹೇಳಿದ್ದೇನೆ. ಅವೆಲ್ಲವನ್ನೂ ನಾನು ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೋಸ್ಕರವೇ ಮಾತುಕತೆಗೆ ಹೋಗುತ್ತಿರುವುದು. ಹತ್ತಾರು ವರ್ಷಗಳಿಂದ ವಿವಾದವಾಗಿ ಉಳಿದಿರತಕ್ಕ, ನಮಗಾಗಿರುವ ಅನ್ಯಾಯವನ್ನು ಸರಿಪಡಿಸುವ ದೃಷ್ಟಿಯಿಂದ ಮಾತುಕತೆಗೆ ಹೋಗುತ್ತಿದ್ದೇವೆಯೇ ಹೊರತು ರಾಷ್ಟ್ರೀಯ ಜಲ ನೀತಿ ಬಗ್ಗೆಯಾಗಲಿ ಅಥವಾ ಈಗ ಮಾನ್ಯ ಸದಸ್ಯರು ಮಾತನಾಡುತ್ತಾ ನ್ಯಾಯ ಮಂಡಳಿಯ ಅಧ್ಯಕ್ಷರ ಬಗ್ಗೆ ಹೇಳಿದರು. ನ್ಯಾಯ ಮಂಡಳಿಗೆ ಅಧ್ಯಕ್ಷರನ್ನು ನೇಮಿಸುವ ವಿಚಾರ ಸರ್ವೋಚ್ಚ ನ್ಯಾಯಲಯಕ್ಕೆ ಮತ್ತು ರಾಷ್ಟ್ರಪತಿಯವರಿಗೆ ಸಂಬಂಧಪಟ್ಟಿದೆ. ರಾಷ್ಟ್ರೀಯ ಜಲ ನೀತಿ ರೂಪಿಸಬೇಕೆಂದು ಕೇಳುವುದರಲ್ಲಿ ನಮ್ಮ ಹಕ್ಕು ಇದೆ, ನಾವು ಇದರ ಬಗ್ಗೆ ಬೇಕಾದಷ್ಟು ಸಲ ತೀರ್ಮಾನ ತೆಗೆದುಕೊಂಡಿದ್ದೇವೆ. ಪ್ರಧಾನಮಂತ್ರಿಗಳು ಸಹ ರಾಷ್ಟ್ರೀಯ ಜಲ ನೀತಿ ರೂಪಿಸಬೇಕೆಂದು ಹೇಳುವುದು ಸರಿಯಾಗಿಯೇ ಇದೆ. ಆದುದರಿಂದ, ಆ ಕುರಿತು ಹೆಚ್ಚಾಗಿ ಪ್ರಸ್ತಾಪ ಮಾಡುವುದರಿಂದ ರಾಜ್ಯಕ್ಕೆ ಅನುಕೂಲವಾಗುವುದಿಲ್ಲವಾದ್ದರಿಂದ ಪ್ರಸ್ತಾಪಿಸುವುದು ಬೇಡವೆಂದು ನಾನು ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಹೆಚ್ಚು ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಈಗ ನೀವು ಏನು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಓದಿದಿರಿ. ಅದರ ಆಧಾರದ ಮೇಲೆಯೇ ನಾನು ಹೇಳುತ್ತೀದ್ದೇನೆ. ಏಕೆಂದರೆ, ಸರ್ವೋಚ್ಚ ನ್ಯಾಯಾಲಯ ತೀರ್ಪು ಕೊಟ್ಟ ನಂತರ ಅವರ ಪ್ರಕಾರ ನಡೆದುಕೊಳ್ಳುವುದಕ್ಕಾಗುವುದಿಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ, ಹೇಳಿದರೆ ನ್ಯಾಯಾಲಯ ನಿಂದನೆಯಾಗುತ್ತದೆಯಲ್ಲದೆ, ಇದರ ಬಗ್ಗೆಯೂ ಅವರು ನಾಳೆ ತೀರ್ಮಾನ ತೆಗೆದುಕೊಳ್ಳಬಹುದು. ಕೊನೆಗೆ ನೀವು 5-6 ಟಿ.ಎಂ.ಸಿ. ಯಷ್ಟು ನೀರು ಬಿಡಬೇಕೆಂದು ಕಳೆದ ಸಲ ಯಾವ ರೀತಿ ನಿರ್ದೇಶನ ಕೊಟ್ಟಿರೋ, ಅದೇ ರೀತಿ ಇಂತಿಷ್ಟು ಪ್ರಮಾಣದ ನೀರು ಬಿಡಬೇಕೆಂದು ನಿಗದಿಪಡಿಸಿ ಆದೇಶ ಕಳುಹಿಸಬಹುದು, ನಾನು ಅದರ ಬಗ್ಗೆ ಹೇಳುವುದಿಲ್ಲ. ಆದರೆ, ನಿರ್ದೇಶನ ಏನಿದೆಯೆಂದರೆ, ನಿಮಗೆ ನ್ಯಾಯ ಮಂಡಳಿಯವರು ಹಿಂದೆ ಏನು ಆದೇಶ ಕೊಟ್ಟಿದ್ದರು, ಅದನ್ನು ಜಾರಿಗೊಳಿಸುವುದಕ್ಕೋಸ್ಕರ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಪರಸ್ಪರ ಒಂದೆಡೆ ಸೇರಿ ಇದರ ಬಗ್ಗೆ ಒಂದು

ರಾಜಕೀಯ ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು, ನಾವು ಇಲ್ಲಿಂದ ಏನೂ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ಧಾಟಿಯಲ್ಲಿ ಅವರು ಆದೇಶ ಕೊಟ್ಟಿದ್ದರು, ಹೌದೇ? ಹೇಗೆಂದರೆ, ನ್ಯಾಯ ಮಂಡಳಿ ಆದೇಶವೆಂದರೆ ಯಾವುದು? ದಿನಾಂಕ 25ನೇ ಜೂನ್, 1991ರ ಆದೇಶದಲ್ಲಿ ಇಂತಹ ತಿಂಗಳು ಇಂತಿಷ್ಟು ಪ್ರಮಾಣದ ನೀರು ಬಿಡಬೇಕೆಂದು ನಿಗದಿಪಡಿಸಿ ಏನು ಆದೇಶವನ್ನು ಹೊರಡಿಸಿದ್ದರು, ಈ ಆದೇಶದ ಬಗ್ಗೆಯೇ ನೀವು ಮಾತನಾಡಿ ಎಂಬು ಪರೋಕ್ಷವಾಗಿ ತಿಳಿಸಲಾಗಿದೆಯೇ ವಿನಾ ಈಗ ನೀವು ಏನನ್ನು ಓದಿದಿರಿ. ಆದನ್ನು ನಾನು ನೋಡಿಲ್ಲ. ನೀವು ಓದಿದಾಗ ನಿಮ್ಮ ಹೇಳಿಕೆ ಬಗ್ಗೆ ಇರುವ ಅಭಿಪ್ರಾಯ ಇದಾಗಿದೆ. ಆದುದರಿಂದ, ಈಗ ಆದೇಶದ ಮೇಲೆ ಮಾತನಾಡಬೇಕೆಂದರೆ ನಮ್ಮಲ್ಲಿ ನೀರಿಲ್ಲ. ಇಷ್ಟು ಪ್ರಮಾಣದಲ್ಲಿ ನೀರು ಬಿಡುತ್ತೇವೆ, ಇಷ್ಟು ಪ್ರಮಾಣದಲ್ಲಿ ನೀರು ಬಿಡುವುದಿಲ್ಲ ಎಂಬುದನ್ನು ಹೇಳುವುದಕ್ಕೆ ಹೋಗಬೇಕೇ ಹೊರತು, ಅದನ್ನು ಬಿಟ್ಟು ಬೇರೆ ಏನನ್ನೂ ಅವರು ಹೇಳಲಿಲ್ಲ. ಆ ವಾಕ್ಯವನ್ನು ಮತ್ತೊಮ್ಮೆ ಓದಿದರೆ ನಿಮಗೂ ಕೂಡ ಮನವರಿಕೆಯಾಗುತ್ತದೆ. ಹಾಗಾಗಿ, ನೀರು ಬಿಡುವುದಕ್ಕೋಸ್ಕರ ಆ ವಿಚಾರವಾಗಿ ಮಾತನಾಡುವುದಕ್ಕೆ ನೀವು ಅಲ್ಲಿಗೆ ಹೋಗುತ್ತಿದ್ದೀರೋ ಹೇಗೆ ಎಂಬುದರ ಬಗ್ಗೆ ಹೇಳಬೇಕು. ಇಲ್ಲದೆ ಹೋದರೆ ರಾಷ್ಟ್ರೀಯ ಜಲ ನೀತಿ ರೂಪಿಸುವವರೆಗೆ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಪರಸ್ಪರ ಭೇಟಿಯಾಗಿ ಚರ್ಚಿಸುವುದು ಸರಿಯಲ್ಲವೆಂದು ನೀವು ಸರ್ವೋಚ್ಚ ನ್ಯಾಯಾಲಯದಲ್ಲಿ ಮತ್ತೊಂದು ಅಪೀಲ್ ಹಾಕುತ್ತೀರೋ ಅಥವಾ ಮೆಮೋಪೈಲ್ ಮಾಡುತ್ತೀರೋ ಎನ್ನುವುದರ ಬಗ್ಗೆ ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ:- ಅದರ ಬಗ್ಗೆ ಈ ಸಂದರ್ಭದಲ್ಲಿ ನಾನು ಹೇಳಲು ತಯಾರಿಲ್ಲ. ಒಂದು ವಿಚಾರದ ಬಗ್ಗೆ ಮಾತ್ರ ನಾನು ಸ್ಪಷ್ಟಪಡಿಸುತ್ತೇವೆ. ಆದರ ಬಗ್ಗೆ ನ್ಯಾಯಾಲಯದಲ್ಲಿ ಹಿಯರಿಂಗ್‌ಗೆ ಬಂದಂಥ ಸಮಯದಲ್ಲಿ ನಮಗೆ ಅರ್ಥವಾಗುತ್ತದೆ. ಇದು ಕೋರ್ಸ್ ಆಫ್ ಹಿಯರಿಂಗ್‌ನಲ್ಲೇ ಬಂದಿರುವುದು. ಇವೊತ್ತು ವಕೀಲರೂ ಸಹ ನನ್ನನ್ನು ಸಂಪರ್ಕಿಸಿ ಒಂದು ಮಾತನ್ನು ಹೇಳಿದ್ದಾರೆ; ನಾನು ವಕೀಲರನ್ನು ಕೇಳಿದೆ. ಎರಡೂ ರಾಜ್ಯಗಳ ಮಧ್ಯೆ ಬಹಳ ವರ್ಷಗಳಿಂದ ಉಳಿದಿರತಕ್ಕ ಸಮಸ್ಯೆಯನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಿ ಬಗೆಹರಿಸಿಕೊಳ್ಳುವುದಾದರೆ ನಾವು ಬಹಳ ಸಂತೋಷವಾಗಿದ್ದೇವೆಂಬುದನ್ನು ಅಲ್ಲಿನ ಪೀಠ ಹೇಳಿದೆ. ಈ ಮಾತನ್ನು ಇಂದು ಬೆಳಿಗ್ಗೆ ದೆಹಲಿಯಿಂದ ವಕೀಲರು ನನಗೆ ದೂರವಾಣಿ ಮೂಲಕ ತಿಳಿಸಿದ್ದಾರೆ. ಆದುದರಿಂದ, ಸ್ಟ್ರಾಟಜಿ ಬಗ್ಗೆ ಸದನದಲ್ಲಿ ನಾವು ಕುಳಿತುಕೊಂಡು ಹೇಳುತ್ತಾ ಹೋದರೆ ರಾಜ್ಯದ ಹಿತಕ್ಕೆ ಒಳ್ಳೆಯದಾಗುತ್ತದೆಂದು ನನಗನ್ನಿಸುವುದಿಲ್ಲ. ಆದುದರಿಂದ, ತಾವೆಲ್ಲರೂ ದಯಮಾಡಿ ಸಹಕರಿಸಬೇಕು. ಸರ್ಕಾರದ ಮೇಲೆ ವಿಶ್ವಾಸವಿಟ್ಟು ನಾವು ಮಾತುಕತೆಗೆ ಹೋಗಲು ಅವಕಾಶ ಕೊಡಬೇಕು, ನಾವು ರಾಜ್ಯದ ಹಿತ ಕಾಪಾಡುವುದಕ್ಕೇ ಹೋಗುತ್ತಿರುವುದು.

ಶ್ರೀ ವಾಟಾಳ್ ವಾಗರಾಜ್:- ಮಾನ್ಯ ಕರುಣಾನಿಧಿಯವರ ಹೇಳಿಕೆ ಪ್ರಕಾರ ನ್ಯಾಯಮಂಡಳಿ ಚೌಕಟ್ಟಿನೊಳಗೆ ಮಾತನಾಡತಕ್ಕಂಥಾದ್ದು ಒಳ್ಳೆಯದಲ್ಲ ಎಂದು ಹೇಳಿದ್ದಾರೆ ಹಾಗೆ ಹೇಳಿದ್ದರೆ ತಾವು

ಮಾತುಕತೆಗೆ ಹೋಗಲೇಬಾರದೆನ್ನುವುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.' ಆ ರೀತಿ ಮಾತುಕತೆಗೆ ಹೋಗುವುದಾದರೆ, ತಾವು ಸರ್ವೋಚ್ಚ ನ್ಯಾಯಾಲಯಕ್ಕೆ ಮತ್ತೊಂದು ಮನವಿ ಸಲ್ಲಿಸಬೇಕು. ನ್ಯಾಯ ಮಂಡಳಿಯ ಚೌಕಟ್ಟಿನೊಳಗೇ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎನ್. ನಾಗೇಗೌಡ:- ನ್ಯಾಯ ಮಂಡಳಿ ಚೌಕಟ್ಟಿನೊಳಗೆ, ಇದ್ಯಾವುದೇ ವಿಚಾರವನ್ನು ನಾವು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಸ್ತಾಪಿಸುವುದಕ್ಕೆ ಹೋಗಿಲ್ಲ. ಎರಡೂ ರಾಜ್ಯಗಳು ಪರಸ್ಪರ ಸೌಹಾರ್ದಯುತವಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ನಾನು ಇದನ್ನು ಒಪ್ಪುವುದಿಲ್ಲ, ಇದು ರಾಜ್ಯದ ಹಿತವಲ್ಲ. ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ:- ಎರಡೂ ರಾಜ್ಯಗಳ ಮಧ್ಯೆ ಪರಸ್ಪರ ಮಾತುಕತೆ ಪ್ರಾರಂಭವಾಗುತ್ತಿರುವುದರಿಂದ ಬಹಳ ಸಂತೋಷಪಡಬೇಕು. ಎಷ್ಟೋ ವರ್ಷಗಳಿಂದ ಮಾತುಕತೆಯಾಗಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನ್ಯಾಯ ಮಂಡಳಿಯ ಚೌಕಟ್ಟಿನೊಳಗೆ ಮಾತನಾಡುವುದಾದರೆ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

2.10 ಪಿ.ಎಂ

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಅಧ್ಯಕ್ಷರೆ, ಸುಪ್ರೀಮ್ ಕೋರ್ಟಿನ ಆದೇಶವೇನು ಎಂಬ ಬಗ್ಗೆ ಅವರು ಪೂರ್ತಿ ಓದಿಲ್ಲ. ಸುಪ್ರೀಮ್ ಕೋರ್ಟ್‌ನ ಆದೇಶವೇನಾಯಿತು ಎಂಬ ಬಗ್ಗೆ ತಾವು ಹೇಳಬೇಕು. ತಾವು ಮೋಹನ್ ಕಾತರಕಿಯವರನ್ನು ಕೇಳಿದೆವು. ಈ ರೀತಿ ಮಾತುಕತೆಯಾಯಿತು ಎಂದು ಹೇಳಿದ್ದೀರಿ. ಮಾತುಕತೆಯಾಗಿದ್ದನ್ನು ಕೋರ್ಟ್‌ನ ಆರ್ಡರನಲ್ಲಿ ಇನ್‌ಕಾರ್ಪೊರೇಟ್ ಮಾಡದಿದ್ದರೆ ಅದು ಆರ್ಡರ್ ಆಗುವುದಿಲ್ಲ. ಸುಪ್ರೀಮ್‌ಕೋರ್ಟ್‌ನಲ್ಲೇನು ಆರ್ಡರ್ ಆಗಿದೆ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಇವತ್ತು ಕೋರ್ಟ್ ಹೊರಗಡೆ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಿ ಎಂದರೆ ಆ ರೀತಿ ಮಾತುಕತೆ ಯಾವುದೇ ಚೌಕಟ್ಟಿನೊಳಗೆ ಬರುವುದಿಲ್ಲ. De-horse the matter pending before either the Tribunal or the Supreme Court ಎಂದರೆ ನೀವು ಹೊರಗಡೆ ಮಾತನಾಡಬೇಕಾಗುತ್ತದೆ. ಅದನ್ನು ಬಿಟ್ಟು ಟ್ರಿಬ್ಯುನಲ್ ಚೌಕಟ್ಟಿನಲ್ಲಿ ಮಾತನಾಡುತ್ತೇವೆಂದರೆ ಅದನ್ನು ಹೊರಗಡೆ ಮಾತನಾಡತಕ್ಕದಲ್ಲ. ಟ್ರಿಬ್ಯುನಲ್ ಚೌಕಟ್ಟಿನಲ್ಲಿ ಮಾತನಾಡುವುದಿದ್ದರೆ ಟ್ರಿಬ್ಯುನಲ್ ಮುಂದೆಯೇ ಮಾತನಾಡಬಹುದಲ್ಲಾ? ಆದ್ದರಿಂದ ಸುಪ್ರೀಂ ಕೋರ್ಟಿನ ಆದೇಶವೇನಿದೆ ಎಂಬ ಬಗ್ಗೆ ಹೇಳಬಹುದಲ್ಲಾ? ಒಂದು ವೇಳೆ ಅವರ ಆದೇಶದಲ್ಲಿ 25-6-1991ರ ಟ್ರಿಬ್ಯುನಲ್‌ನಲ್ಲಿ ಏನು ಆದೇಶವಾಯಿತು ಅದರ ಬಗ್ಗೆ ನೀವುಗಳು ಹೊರಗಡೆ ಮಾತುಕತೆ ಮಾಡಿ ನಮ್ಮೆಲ್ಲರ ವಿರೋಧ ಅದಕ್ಕೆ ಇದೆ. ರಾಷ್ಟ್ರೀಯ ಜಲನೀತಿಯು ಆಗುವವರೆಗೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಿಲ್ಲವೆಂದು ಈಗಾಗಲೇ ನಾವು ಹೇಳಿದ್ದೇವೆ. ಆದ್ದರಿಂದ

ಮಾನ್ಯ ಕರುಣಾನಿಧಿಯವರೇನು ಟ್ರಿಬ್ಯುನಲ್ ಚೌಕಟ್ಟಿನ ಆಡಿಯಲ್ಲಿಯೇ ಮಾತನಾಡುವುದಾಗಿ ಹೇಳಿದ್ದಾರೆ, ಅದರಂತೆ ತಾವು ಹೋಗುವುದಾದರೆ ಪ್ರಯೋಜನವಾಗುವುದಿಲ್ಲ. ನಮ್ಮ ರಾಜ್ಯಕ್ಕೆ ಅದರಿಂದ ಹಿತವಾಗುವುದಿಲ್ಲ. ಮಾನ್ಯ ಕರುಣಾನಿಧಿಯವರು ಇದರ ಬಗ್ಗೆ ಸ್ಪಷ್ಟ ಮಾಡಿರುವುದರಿಂದ ತಾವು ಟ್ರಿಬ್ಯುನಲ್ ಹೊರಗಡೆ ಮಾತುಕತೆ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ರಾಜ್ಯಕ್ಕೆ ಅನಾನುಕೂಲವಾಗುತ್ತದೆ. ಆದ್ದರಿಂದ ಅವರು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು:- ವಿಧಾನಸಭೆಯಲ್ಲಿ ನದಿ ನೀರಿನ ಸಮಸ್ಯೆಯಿಂದ ಬಹಳ ತೊಂದರೆಯಾಗಿಬಿಟ್ಟಿದೆ.

ಶ್ರೀ ಎಂ. ನಾರಾಯಣಸ್ವಾಮಿ:- ಅಧ್ಯಕ್ಷರೆ, ಇದರ ಬಗ್ಗೆ ಕಳಕಳಿ ಇರುವುದು ಅವರೊಬ್ಬರಿಗೆ ಮಾತ್ರವಲ್ಲ ನಮಗೂ ಇದೆ.

ಅಧ್ಯಕ್ಷರು:- ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) :- ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್-ನವರು ಎರಡೂ ರಾಜ್ಯಗಳವರು ಮಾತುಕತೆಯ ಮೂಲಕ ಸೌಹಾರ್ದಯುತವಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಆದೇಶ ಕೊಟ್ಟಿದ್ದಾರೆ. ತಮಿಳುನಾಡಿನ ಮುಖ್ಯಮಂತ್ರಿಯವರು ಆ ರೀತಿ ಮಾತುಕತೆಯಲ್ಲಿ ಟ್ರಿಬ್ಯುನಲ್ ಚೌಕಟ್ಟಿನಲ್ಲಿ ಮಾತನಾಡುವುದಾಗಿ ಹೇಳಿದ್ದಾರೆ. ರಾಷ್ಟ್ರೀಯ ಜಲನೀತಿ ರೂಪಿಸತಕ್ಕ ಉತ್ತಮವಾದ ಸಲಹೆಗಳನ್ನು ಕೇಂದ್ರ ಸರ್ಕಾರಕ್ಕೆ ಕೊಡಲಾಗಿದೆ. ಆ ರಾಷ್ಟ್ರೀಯ ಜಲ ನೀತಿಯಲ್ಲಿ ಸೂಚಿಸಿರುವ ವ್ಯಾಪ್ತಿಯಲ್ಲಿ ನಾವು ಮಾತನಾಡುತ್ತೇವೆಂದು ಹೇಳಿದರೆ ಸರ್ಕಾರದ ನಿಲುವು ಸ್ಪಷ್ಟವಾಗುತ್ತದೆ.

ಶ್ರೀ ಕೆ.ಎವ್. ನಾಗೇಗೌಡ:- ನಮ್ಮ ನ್ಯಾಯಧೀಶರುಗಳು ವಿಷಯವನ್ನು ನಮ್ಮ ಕೌನ್ಸಿಲ್‌ಗೆ ತಿಳಿಸಿದ್ದಾರೆ. ನಾನು ಹೆಚ್ಚು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ರಾಜ್ಯದ ಹಿತಕ್ಕೋಸ್ಕರ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆಯೇ ವಿನಹ ಬೇರೆ ಉದ್ದೇಶವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೆ, ವಿರೋಧಪಕ್ಷದಲ್ಲಿ ನಾವುಗಳಿದ್ದು ಏನು ಮಾಡಿದಿರಿ ಎನ್ನತಕ್ಕ ಪ್ರಶ್ನೆ ಬರುತ್ತದೆ. ಆವರು ಸರ್ಕಾರದ ನಿಲುವಿನ ಬಗ್ಗೆ ಸ್ಪಷ್ಟಮಾಡಿಲ್ಲ. ರಾಷ್ಟ್ರೀಯ ಜಲನೀತಿಯನ್ನು ರೂಪಿಸದೆಯೇ, ಟ್ರಿಬ್ಯುನಲ್‌ನ ಹೊರಗಡೆ ಮಾತುಕತೆಯಾಡುತ್ತೇವೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟ ಮಾಡದಿರುವುದರಿಂದ ಕೇಂದ್ರ ಸರ್ಕಾರವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ನಮ್ಮ ರಾಜ್ಯದ ಹಿತವನ್ನು ಬಲಿ ಕೊಡತಕ್ಕ ಸಂಚು ಇದರಲ್ಲಿದೆ, ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವು ಸದನವನ್ನು ತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ. ಜೆ. ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎನ್. ನಾಗೇಗೌಡ:- ಅಧ್ಯಕ್ಷರೆ, ಇದು ರಾಜಕೀಯ ಆರೋಪ. ಇದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಶ್ರೀ.ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಯಾವ ಆಧಾರದ ಮೇಲೆ ತಾವು ಮಾತನಾಡುತ್ತೀರಿ ಎಂಬ ಬಗ್ಗೆ ನಮಗೆ ತಿಳಿಸಿಲ್ಲ. 5ನೇ ತಾರೀಖು ಮಾತುಕತೆ ಮಾಡಲು ನಿಗದಿ ಮಾಡಿಕೊಂಡಿದ್ದೀರಿ. ಆ ರೀತಿ ದಿನಾಂಕವನ್ನು ನಿಗದಿ ಮಾಡಿಕೊಂಡಿದ್ದಾಗಲೂ 25-6-1991ರ ಟ್ರಿಬ್ಯುನಲ್ ಆದೇಶದ ಚೌಕಟ್ಟಿನಲ್ಲಿ ಮಾತನಾಡುತ್ತೀರೋ ರಾಷ್ಟ್ರೀಯ ಜಲನೀತಿಯೆಂದೇನು ಹೊಸದಾಗಿ ಪಾಲಿಸಿ ಇದೆ ಅದರ ಅಡಿಯಲ್ಲಿ ಮಾತನಾಡುತ್ತೀರೋ ಎಂಬ ಬಗ್ಗೆ ಸ್ಪಷ್ಟ ಮಾಡಿಲ್ಲ. ಸರ್ಕಾರದ ಸ್ಪಷ್ಟವಾದ ನಿಲುವು ಇಲ್ಲದಿರುವ ನೀತಿಯನ್ನು ಖಂಡಿಸಿ ನಾವೂ ಸಭಾತ್ಯಾಗ ಮಾಡುತ್ತಿದ್ದೇವೆ.

(ಕಾಂಗ್ರೆಸ್ (ಐ)ನ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಈಗ ಸದನವನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 2-15ಕ್ಕೆ ಮುಕ್ತಾಯಗೊಂಡು ಪುನಃ 3 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3.20 ಗಂಟೆಗೆ ಪ್ರಾರಂಭವಾಯಿತು. ಮಾನ್ಯ ಉಪಾಧ್ಯಕ್ಷ (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು:- ಮಾನ್ಯ ಮಂಜುನಾಥ ಕುನೂರ್‌ರವರೇ ತಾವು ಈಗಾಗಲೇ ಮಾತನಾಡಿದ್ದೀರಿ. ಇನ್ನು ಐದು ನಿಮಿಷಗಳಲ್ಲಿ ತಮ್ಮ ಬೇಡಿಕೆಗಳ ಮೇಲಿನ ಭಾಷಣವನ್ನು ಮುಗಿಸಬೇಕು. ಇನ್ನೂ ಬಹಳಷ್ಟು ಸದಸ್ಯರು ಮಾತನಾಡುವವರು ಇದ್ದಾರೆ.

(6) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ (ಆ):- ಹುಬ್ಬಳ್ಳಿಯಲ್ಲಿ ರೈಲ್ವೆ ವಲಯ ಹಾಗು ಹೈಕೋರ್ಟಿನ ನ್ಯಾಯ ಪೀಠದ ರಚನೆ

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ವಿಚಾರ, ಉತ್ತರ ಕರ್ನಾಟಕ ಬಂದ್ ಆಗಿದೆ. ಮುಖ್ಯವಾಗಿ ರೈಲ್ವೆ ವಲಯ ಹಾಗೂ ಹೈಕೋರ್ಟ್ ನ್ಯಾಯ ಪೀಠದ ಬಗ್ಗೆ ನಾವು ಒಬ್ಬ ಶಾಸಕರಾಗಿ ಪ್ರಸ್ತಾಪ ಮಾಡದಿದ್ದರೆ. . .

ಉಪಾಧ್ಯಕ್ಷರು:- ಹೀಗೆ ಮಾತನಾಡುವುದು ಸರಿಯಲ್ಲ, ಈಗ ಇದು ಎಲ್ಲಾ ಹಾಗೆ ಉಳಿಯುತ್ತದೆ. ನಾಳೆ ಇದಕ್ಕೆ ರಿಪ್ಲೈ ಕೊಡಬೇಕಾಗಿದೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಮುಖ್ಯಮಂತ್ರಿಗಳು, ಈಗಿನ ಪ್ರಧಾನಮಂತ್ರಿಯವರು ಆಗಿರುವವರು ಕರ್ನಾಟಕ ರಾಜ್ಯದ ದೃಷ್ಟಿಯಿಂದ ಕೇಂದ್ರವಲಯ ಹುಬ್ಬಳ್ಳಿಯಲ್ಲಿ ಆಗಬೇಕೆಂದು, ಇದು ಇಡೀ ಉತ್ತರ ಕರ್ನಾಟಕ ಜನರ ಬೇಡಿಕೆಯಾಗಿದೆ. ಉತ್ತರ ಕರ್ನಾಟಕದ ಬಗ್ಗೆ ಏನು ನಿಲುವು ತೆಗೆದುಕೊಳ್ಳುತ್ತಿದ್ದೀರಿ ಎಂಬ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಆದುದರಿಂದ ಹುಬ್ಬಳ್ಳಿ ಕೇಂದ್ರ ವಲಯವಾಗಬೇಕೆನ್ನುವುದಕ್ಕೆ ಸರ್ಕಾರ ನಾಳೆಯೇ ಒಂದು ನೋಟ್ ಕಳುಹಿಸಿಕೊಡಬೇಕು.